## ರುಚಿಕರ 'ತಾರೊಲು' ಹಣ್ಣು!



ಬಾಲ್ಯದಲ್ಲಿ ಕರಾವಳಿಯ ಪ್ರಾಥಮಿಕ ಶಾಲೆಗೆ, ಹಾಡಿಯ ದಾರಿಯಲ್ಲಿ ಸುಮಾರು 2 ಕಿ.ಮೀ. ನಡೆದುಕೊಂಡು ಹೋಗಬೇಕಿತ್ತು. ಮಳೆಗಾಲದಲ್ಲಿ ದಾರಿ ಮಧ್ಯೆ ಹಣ್ಣುಗಳಿಂದ ತುಂಬಿರುತ್ತಿದ್ದ ಕೇಪುಳ, ಕುಂಟಲ, ಜಾರಿಗೆ, ನೇರಳೆ ಇತ್ಯಾದಿ ಹಣ್ಣುಗಳ ಮರಗಳು ಗಮನ ಸೆಳೆಯುತ್ತಿದ್ದವು. ಅವುಗಳಲ್ಲಿ ಹಳದಿ/ಕಿತ್ತಳೆ ಬಣ್ಣದ ಸುಮಾರು ಒಂದು ಸೆ.ಮೀ. ವ್ಯಾಸದ ಗೊಂಚಲು ಗೊಂಚಲಾದ ಹಣ್ಣುಗಳು ಕಣ್ಸೆಳೆದು ಕಿತ್ತು ತಿನ್ನಲು ಪ್ರೇರೇಪಿಸುತ್ತಿದ್ದವು. ಕಾಯಿಯ ಹೊರಕವಚಗಳು ಬಿರಿದು ಮರವನ್ನು ಆಕರ್ಷಕವಾಗಿಸುತ್ತಿದ್ದ ಈ ರುಚಿಕರ ಹಣ್ಣುಗಳು ಹೊರ ಪ್ರಪಂಚವನ್ನು ಇಣುಕುವ ಸೊಬಗನ್ನು ಕಣ್ಣಾರೆ ಕಂಡೇ ಸವಿಯಬೇಕು ಅನಿಸುತ್ತದೆ. ತುಳುವಿನಲ್ಲಿ 'ತಾರೊಲು' ಎಂದು ಕರೆಯಲ್ಪಡುವ ಸದ್ರಿ ಹಣ್ಣುಗಳಿಗೆ ಕನ್ನಡದಲ್ಲಿ ಸಳ್ಳೆ, ಚಳ್ಳೆ ಅಥವಾ ಸರೊಲಿ ಹಣ್ಣೆಂದೂ ನಾಮಧೇಯವಿದೆ.

ಸಿಹಿ ಮಿಶ್ರಿತ ಹುಳಿಯೊಂದಿಗೆ ಬಾಯಲ್ಲಿ ನೀರೂರಿಸುವ ಈ ರುಚಿಕರ ಹಣ್ಣುಗಳನ್ನು ನೆಲದಿಂದಲೇ ಕೈಗೆಟುಕುವ ಮರಗಳಿಂದಲೇ ಕಿತ್ತು, ಶಾಲೆಯಿಂದ ಮನೆಗೆ ಹಿಂತಿರುಗುವ ದಾರಿಯಲ್ಲಿ ಮನೆಯವರಿಗೆ ತಿಳಿಯದಂತೆ ಮನಸೋಚ್ಛೆ ತಿನ್ನುತ್ತಿದ್ದೆವು. ಏಕೆಂದರೆ ಹೆಚ್ಚು ತಿಂದರೆ ಪಿತ್ತವೆಂದು ಮನೆಯಲ್ಲಿ ಹಿರಿಯರು ತಿನ್ನಲು ಬಿಡುತ್ತಿರಲಿಲ್ಲ! ಮರಗಳು ಕೇವಲ 2–3 ಮೀಟರುಗಳಷ್ಟು ಎತ್ತರಕ್ಕೆ ಬೆಳೆಯುತ್ತವೆ. ನಗರ ಜೀವನದ ನಡುವೆ ಈಗ ಅವೆಲ್ಲಾ ಅಪರೂಪವೆನಿಸಿವೆ!

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಜಲಚರಗಳ ಸೆರೆಗೆ ಮತ್ಸ್ಯ ಬುಟ್ಟಿ

ಮೀನುಗಳನ್ನು ಮತ್ತು ಮಳೆಗಾಲದಲ್ಲಿ ಏಡಿಗಳನ್ನು ಹಿಡಿಯಲು ಹಿಂದೆ ಬಿದಿರಿನಿಂದ ಮಾಡಿದ ಬುಟ್ಟಿಗಳನ್ನು ಹಳ್ಳಿಗಳಲ್ಲಿ ಬಳಸುತ್ತಿದ್ದರು. ಈ ಬುಟ್ಟಿಗಳನ್ನು ಹಳ್ಳಿಗಾಡಲ್ಲಿ 'ಗೂರಿ', 'ಮತ್ಸ್ಯ ಬುಟ್ಟಿ' ಎಂದೂ ಕರೆಯುತ್ತಾರೆ. ಇದು ಗ್ರಾಮೀಣ ಜನರ ಮೀನುಗಳನ್ನು ಹಿಡಿಯುವ ಉಪಕರಣವಾಗಿದ್ದು, ಇದನ್ನು ಹಳ್ಳಿಗರು ಕೈಯಲ್ಲೇ ತಯಾರಿಸುತ್ತಿದ್ದರು.



ಹಳ್ಳಿಯ ಜನರು ನದಿ–ಹಳ್ಳ–ಕೊಳ್ಳಗಳಲ್ಲಿ ಮೀನು, ಏಡಿ, ಆಮೆ ಮುಂತಾದ ಜಲಚರ ಜೀವಿಗಳನ್ನು ಹಿಡಿಯಲು ಇಂತಹ ಬುಟ್ಟಿಗಳನ್ನು ಬಳಸುತ್ತಿದ್ದರು. ಇಂದಿನ ದಿನಗಳಲ್ಲಿ ಮೀನುಗಳನ್ನು ಹಿಡಿಯಲು ಬಲೆಯನ್ನು ಬಳಸುವುದನ್ನು ಹೆಚ್ಚಾಗಿ ನೋಡುತ್ತೇವೆ. ಕರಾವಳಿ ಪ್ರದೇಶದಲ್ಲಂತೂ ಹೆಚ್ಚಾಗಿ ಬಳಕೆಯಲ್ಲಿದ್ದ ಈ ಮತ್ಸ್ಯ ಬುಟ್ಟಿಗಳು ಈಗ ಅಷ್ಟಾಗಿ ಬಳಕೆಯಲ್ಲಿಲ್ಲ. ಅಲ್ಲದೆ ಇಂತಹ ಬುಟ್ಟಿಗಳನ್ನು ಹೆಣೆಯುತ್ತಿದ್ದ ನುರಿತ ಗ್ರಾಮೀಣ ಭಾಗದ ಕುಶಲಕರ್ಮಿಗಳ ಪ್ರಮಾಣವೂ ಕ್ಷೀಣಿಸಿದೆ.

–ಶಂಕರಿ, ಕಾರ್ಕಳ




## ಗಾಂಧಿ ಮೆಚ್ಚಿದ ರೆಸ್ಟೋರೆಂಟ್!

ಗುಜರಾತ್‌ನ ಅಹಮದಾಬಾದ್ ಸಮೀಪದ ಗಾಂಧಿ ಮಾರ್ಗದಲ್ಲಿ (ಗಾಂಧಿ ರಸ್ತೆ) 'ಶ್ರೀ ಚಂದ್ರಾವಿಲಾಸ ರೆಸ್ಟೋರೆಂಟ್' ಇದೆ. ಗುಜರಾತಿನ ತಿಂಡಿ ತಿನಿಸುಗಳಿಗೆ ಪ್ರಸಿದ್ಧಿಯಾದ ರೆಸ್ಟೋರೆಂಟ್‌ಗಳ, ಹೋಟೆಲ್‌ಗಳ ಪೈಕಿ ಇದೂ ಒಂದು. ಈ ರೆಸ್ಟೋರೆಂಟ್ ಶುರುವಾಗಿದ್ದು ನೂರ ಇಪ್ಪತ್ತು ವರ್ಷಗಳಿಗೂ ಹಿಂದೆ.



ಆದರೂ ಕಾಲಕಾಲಕ್ಕೆ ಬದಲಾಗುತ್ತಾ ಇನ್ನೂ ತನ್ನ ಗ್ರಾಹಕರನ್ನು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಮಹಾತ್ಮ ಗಾಂಧಿ, ವಲ್ಲಭಬಾಯಿ ಪಟೇಲ್‌ರಂತಹ ರಾಷ್ಟ್ರ ನಿರ್ಮಾತೃಗಳು ಹಾಗೂ ಸಿನಿಮಾ ರಂಗದ ದಿಗ್ಗಜರಾದ ಕಿಶೋರ್ ಕುಮಾರ್, ರಾಜ್ ಕಪೂರ್‌ರಂಥವರೂ ಗ್ರಾಹಕರಾಗಿದ್ದ ರೆಸ್ಟೋರೆಂಟ್ ಎಂಬುದು ಇದರ ಹೆಗ್ಗಳಿಕೆ. ಚಿಮನ್ ಲಾಲ್ ಜೋಶಿಯವರು 1900ರಲ್ಲಿ ಈ ರೆಸ್ಟೋರೆಂಟ್ ಸ್ಥಾಪನೆ ಮಾಡಿದಾಗ 'ಗುಜರಾತ್ ಥಾಲಿ'ಯನ್ನು ಪ್ರಪ್ರಥಮವಾಗಿ ಪರಿಚಯಿಸಿದರು ಎನ್ನಲಾಗಿದೆ. ಪಾರಂಪರಿಕ ಹೋಟೆಲ್ ಎನ್ನುವ ಹೆಮ್ಮೆಯೂ ಇದಕ್ಕಿದೆ.

–ಬಿ. ಸತ್ಯನಾರಾಯಣ ಅರಸ, ಉಡುಪಿ

### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly